

# ಅಸಹಾಯಕರ ಆಶಾಜೀವಿ ಹಫಿಜುರ್

■ ರಾಹುಲ ಬೆಳಗಲಿ

**ಲಕ್ಷ್ಮಿಗಚ್ಚ ಗ್ರಾಮದ ನಿವಾಸಿ ಹಫಿಜುರ್ ರಹಮಾನ್ ವಿಧವೆ ಮಹಿಳೆಯರಿಗೆ ಸ್ವಾಭಿಮಾನದ ಬದುಕು ಕಲ್ಪಿಸಲು ತಮ್ಮ ಜಮೀನನ್ನೇ ಮಾರಾಟ ಮಾಡಿದ್ದಾರೆ.**

ಒಂದಿಷ್ಟು ಜಮೀನು ಪಿತ್ರಾರ್ಜಿತವಾಗಿ ಬಂದರೆ, ಅದರ ವಿಸ್ತರಣೆ ಮತ್ತು ಆಸ್ತಿ ವೃದ್ಧಿ ಬಗ್ಗೆಯೇ ಆಲೋಚನೆ ಮೂಡುತ್ತದೆ. ಕೂಡು ಕುಟುಂಬಗಳಿದ್ದರೆ, ಬಹುತೇಕ ಸದಸ್ಯರ ಕಣ್ಣು ಅದರ ಮೇಲೆಯೇ ಇರುತ್ತದೆ. ಕಲಹಕ್ಕೂ ಆಸ್ಪದ ನೀಡುತ್ತದೆ. ಜಮೀನು ಇದ್ದರೆ, ಕೆಲವರು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗುತ್ತಾರೆ. ಮಾಲ್ ಅಥವಾ ಅಪಾರ್ಟ್‌ಮೆಂಟ್ ನಿರ್ಮಿಸಲು ಇಚ್ಛಿಸುತ್ತಾರೆ. ಹೀಗೆ ಬಹುತೇಕ ಜನರಂತೆಯೇ ಪಶ್ಚಿಮ ಬಂಗಾಳದ ಹಫಿಜುರ್ ರೆಹಮಾನ್ ಕೂಡ ತಮ್ಮ ಫಲವತ್ತಾದ ಕೃಷಿ ಜಮೀನನ್ನು ಹಂತಹಂತವಾಗಿ ಮಾರಿದರು. ಹಣವನ್ನೂ ಪಡೆದರು. ಆದರೆ, ಎಲ್ಲರಂತೆ ಸ್ವಂತಕ್ಕೆ ಏನನ್ನೂ ಮಾಡಿಕೊಳ್ಳಲಿಲ್ಲ. ತಮ್ಮ ಕುಟುಂಬ ಸದಸ್ಯರಿಗೂ ವಿನಿಯೋಗಿಸಲಿಲ್ಲ!

ಅವರು ಮಾಡಿದ್ದು ಎರಡೇ ಕೆಲಸ. ಮೊದಲನೆಯದ್ದು, ನಿರ್ಗತಿಕ ಮತ್ತು ವಿಧವಾ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಕೊಡಿಸಿ, ಹೊಲಿಗೆ ತರಬೇತಿಗೆ ವ್ಯವಸ್ಥೆ ಮಾಡಿದರು. ಎರಡನೆಯದ್ದು, ಅವರಿಗೆ ಆರ್ಥಿಕವಾಗಿ ಸಬಲರಾಗುವುದರ ಜೊತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮಾರ್ಗದರ್ಶನ ನೀಡಿದರು. ಈ ಪ್ರಕ್ರಿಯೆಗೆ ಆರಂಭಿಕ ಹಂತದಲ್ಲಿ 50 ರಿಂದ 100 ಮಹಿಳೆಯರಷ್ಟೇ ಆಸಕ್ತಿ ತೋರಿದರು. ಸದ್ಯ ಅವರ ಸಂಖ್ಯೆ 2 ಸಾವಿರಕ್ಕೂ ಹೆಚ್ಚಿದೆ. ಸ್ವಸಾಮರ್ಥ್ಯದ ಮೇಲೆ ನೆಮ್ಮದಿಯ ಜೀವನ ನಡೆಸಿದ್ದಾರೆ.

ಕೋಲ್ಕತ್ತದಿಂದ ಸುಮಾರು 140 ಕಿ.ಮೀ.ದೂರದಲ್ಲಿ ಇರುವ ನಾಡಿಯಾ ಜಿಲ್ಲೆಯ ಲಕ್ಷ್ಮಿಗಚ್ಚ ಗ್ರಾಮದ ನಿವಾಸಿ ಹಫಿಜುರ್ ರಹಮಾನ್ ಶ್ರೀಮಂತರೇನಲ್ಲ. ಅವರ ವಯಸ್ಸು 80. ಈ ಇಳಿವಯಸ್ಸಿನಲ್ಲಿ ಹಲವರು ಆರೋಗ್ಯ ಮತ್ತು ಆರ್ಥಿಕ ದೃಷ್ಟಿಯಿಂದ ಕುಟುಂಬದ ಆಶ್ರಯದಲ್ಲಿ ಇರುತ್ತಾರೆ. ಆದರೆ, ಅವರು ಸಾವಿರಾರು ಮನೆಗಳಿಗೆ ಆಶ್ರಯದಾತರು ಆಗಿದ್ದಾರೆ. ಇದಕ್ಕಾಗಿ ಅವರು ಪಟ್ಟ ಶ್ರಮ, ಮಾಡಿದ ಸಾಹಸಗಳು ಒಂದೆರಡಲ್ಲ. ಎದುರಿಸಿದ ಸವಾಲುಗಳು ಕಡಿಮೆಯೇನಲ್ಲ.

ಗ್ರಾಮೀಣ ಪ್ರದೇಶದಲ್ಲಿ ವಿಧವೆ ಮಹಿಳೆಯರು ಅಸಹಾಯಕ ಸ್ಥಿತಿಯಲ್ಲಿ ಬದುಕುತ್ತಿರುವುದು ಕಂಡು ಮರುಗಿದ ಹಫಿಜುರ್ ಅವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. 1995ರಲ್ಲಿ ಸ್ನೇಹಿತರ ಜೊತೆಗೂಡಿ 'ಲಕ್ಷ್ಮಿಗಚ್ಚ ಜನಕಲ್ಯಾಣ ಸಂಘ' ಹುಟ್ಟು ಹಾಕಿ, ಮಹಿಳೆಯರಿಗೆ ನೆರವಾಗಲು ನಿರ್ಧರಿಸಿದರು.

ಅವರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಯನ್ನು ಮಾರಾಟ ಮಾಡಿ, ಹೊಲಿಗೆ ಯಂತ್ರಗಳ ಖರೀದಿ ಮತ್ತು ಮಹಿಳೆಯರ ಹೊಲಿಗೆ ತರಬೇತಿಗೆ ವಿನಿಯೋಗಿಸಿದರು. ಒಂದು ಬಾಡಿಗೆ ಕೊಠಡಿಯಲ್ಲಿ ಹೊಲಿಗೆ ತರಬೇತಿ ತರಗತಿಗಳನ್ನು ಆರಂಭಿಸಿದರು. ಅದಕ್ಕಾಗಿ ಹೊಲಿಗೆ ತಜ್ಞರನ್ನು ನೇಮಿಸಿದರು. ಮಹಿಳೆಯರಿಗೆ ಹೊಲಿಗೆ ಹಾಕುವುದನ್ನಷ್ಟೇ ಕಲಿಸಲಿಲ್ಲ, ಬದುಕನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬ ಬಗ್ಗೆ ಮಾರ್ಗದರ್ಶನ ನೀಡಿದರು. 1995 ರಿಂದ 2020ರವರೆಗಿನ 25 ವರ್ಷಗಳ ಅವಧಿಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮಹಿಳೆಯರು, ಯುವತಿಯರು ಹೊಲಿಗೆ ತರಬೇತಿ ಪಡೆದರು. ಇದಕ್ಕೆಲ್ಲ ಪೂರಕವಾಗಿ ದೆಹಲಿಯ ಉದ್ಯಮಿ ಮುಷ್ತಾಕ್ ಹುಸೇನ್ ಅವರಿಂದ ₹ 15 ಲಕ್ಷ ದೇಣಿಗೆ ದೊರೆಯಿತು. ಇದು ಸಂಘದ ಚಟುವಟಿಕೆಗಳಿಗೆ ಇನ್ನಷ್ಟು ವೇಗ ನೀಡಿತು.

ಹಫಿಜುರ್ ಅವರು ಇಷ್ಟಕ್ಕೆ ಸಮಾಧಾನವಾಗಲಿಲ್ಲ. ಹೊಲಿಗೆಯಷ್ಟೇ ಕಲಿತರೆ ಸಾಕೆ? ಆರೋಗ್ಯ ಪರಿಸ್ಥಿತಿ ನೋಡಿಕೊಳ್ಳುವುದು ಬೇಡವೇ ಎಂದು ಪ್ರತಿ ತಿಂಗಳ ಕೊನೆಯ ಭಾನುವಾರ ಮಹಿಳೆಯರ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸತೊಡಗಿದರು. ಉಚಿತ ಔಷಧ ಪೂರೈಕೆ ವ್ಯವಸ್ಥೆ ಮಾಡಿದರು. ಇದು ಕೂಡ ಯಶಸ್ವಿಯಾಗಿ ಮುಂದುವರೆದಿದೆ. ಕೋವಿಡ್ ದಿನಗಳಲ್ಲಿ ಸಂಘದ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದ್ದು ಹೊರತುಪಡಿಸಿದರೆ, ನಂತರದ ದಿನಗಳಲ್ಲಿ ಯಾವುದೇ ಸಮಸ್ಯೆ ಆಗಲಿಲ್ಲ.

'ಜಮೀನು ಮಾರಿದ್ದಕ್ಕೆ ಕುಟುಂಬ ಸದಸ್ಯರು ಬೇಸರಗೊಂಡಿದ್ದಾರೆ. ಸಂಘದ ಚಟುವಟಿಕೆಗಳಿಗೆ ಹೆಚ್ಚಿನ ಸಮಯ ವ್ಯಯ ಮಾಡುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಾರೆ. ಆದರೆ, ನಾನು ಸುಮ್ಮನಿರುತ್ತೇನೆ. ಸಂಕಷ್ಟದಲ್ಲಿ ಇರುವವರಿಗೆ ಮತ್ತು ಅಸಹಾಯಕ ಸ್ಥಿತಿಯಲ್ಲಿ ಬದುಕುತ್ತಿರುವವರಿಗೆ ಸಹಾಯ ಮಾಡಲು ಪ್ರವಾದಿ ಮಹಮ್ಮದ್ ಅವರಿಂದ ನಿರಂತರ ಸ್ಫೂರ್ತಿ ಪಡೆಯುತ್ತೇನೆ' ಎಂದು ಹಫಿಜುರ್ ಮುಗುಳ್ನಗುತ್ತಾರೆ.

'ಮನುಷ್ಯರಾಗಿ ಹುಟ್ಟಿದ ಬಳಿಕ ಪರಸ್ಪರ ಸಹಾಯ ಮಾಡಬೇಕು. ವ್ಯಕ್ತಿ ಸಣ್ಣವ ಅಥವಾ ದೊಡ್ಡವನೇ ಇರಲಿ. ಯಾವುದೇ ತಾರತಮ್ಯ ಮಾಡದೇ ಮತ್ತು ಫಲಾಪೇಕ್ಷೆಯ ನಿರೀಕ್ಷೆಯಿಲ್ಲದೇ ನೆರವಾಗಬೇಕು. ಇದು ನಿಜವಾದ ಮನುಷ್ಯ ಗುಣ. ಬದುಕು ಸಾರ್ಥಕವಾಗಲು ಇಂತಹ ಗುಣಗಳು ಬೇಕು' ಎಂದು ಅವರು ಹೇಳುತ್ತಾರೆ. ನಿರುದ್ಯೋಗಿ ಸಮಸ್ಯೆ ನಿವಾರಿಸಲು ಮತ್ತು ವಲಸೆ ಹೋಗುವುದನ್ನು ತಡೆಯಲು ಯುವಜನರಿಗೆ ಗ್ರಾಮಗಳಲ್ಲೇ ಉದ್ಯೋಗಾವಕಾಶ ಕಲ್ಪಿಸಲು ಯೋಜನೆಗಳನ್ನು ರೂಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65